ಮರಳುಗಾಡಿನಂತಿರುವ ಭೂಮಿ, ಎಷ್ಟು ನೀರು ಬಿಟ್ಟರೂ ಕುಡಿದು ಬಿಡುವ ರಾಕ್ಷಸೀತನ. ಹರಿದ ನೀರಿನ ಜಾಡು ಕ್ಷಣದಲ್ಲೇ ಕಣ್ಮರೆಯಾಗುವ ಭೀತಿ. 'ಹತ್ತಾರು ಜನ ನಡೆದ ಹಾದಿಯಲ್ಲಿ ಹುಲ್ಲು ಹುಟ್ಟಲ್ಲ' ಈ ಮಾತಿಗೆ ನಾನೇ ಹೆಸರಾದನೆ ಎಂಬ ಭಯ, ಅಂಜಿಕೆ. ತನ್ನ ಗರ್ಭಕ್ಕೆ ಹೇಸಿದಳು. ಹಾಗಾದರೆ ಇನ್ನಾದರೂ ಏಕೆ ಫಲ ಕಚ್ಚಲಿಲ್ಲ. ದಿಕ್ಕುದಿಕ್ಕಿಗೂ ಕೈ ಮುಗಿದು, ಕಂಡಕಂಡ ದೇವರಿಗೂ ಕಾಯಿ ಒಡೆದಳು. ಫಲದ ಕನಸು ಕಂಡು ಸಾಕಾಗಿದೆ ಜೀವ. ಮಳೆ ಬಂದು ಹೊಲ ಹದವಾದ ಕಾಲಕ್ಕೆ ಗಟ್ಟಿಬೀಜ ಬಿತ್ತಲಾಗದ ಗಂಡಸರು! ಅವರ ಗಂಡಸುತನಕ್ಕೆ ಹೇಸಿದಳು.

* * *

ತುಂತುರು ಮಳೆಗೆ ಭೂಮಿ ಘಮ್ಮೆನ್ನುತ್ತಿತ್ತು. ಆಕಾಶ ಶುಭ್ರವಾಗಿ ನಕ್ಷತ್ರಗಳ ಹೊಳಪು ಹೆಚ್ಚಾಗಿತ್ತು. ಹಾಸಿಗೆ ಮೇಲೆ ತನ್ನ ಮೈ ಹರಡಿದಳು. ಆದರೂ ವನಜಾಕ್ಷಿಗೆ ನಿದ್ದೆ ಹತ್ತಲಿಲ್ಲ. ಮುಳ್ಳಿನ ಹಾಸಿಗೆ ಮೇಲೆ ಹೊರಳಿಹೊರಳಿ ಸಾಕಾದಳು. ಈ ದೇಹ ಮತ್ತು ಮನಸ್ಸಿಗೆ ದಣಿವಾರಿಸುವವರು ಬೇಕೆನ್ನಿಸಿತು. ಪಕ್ಕದಲ್ಲಿ ಮಲಗಿರುವ ಗಂಡ, ತನ್ನ ಶಕ್ತಿ, ಸಾಮರ್ಥ್ಯಕ್ಕೆ ಸಮವಾಗಿ ಮೈದಡವಿದ. ಎಷ್ಟು ಹೊತ್ತು ಮಾಡಿದ್ದನ್ನೇ ಮಾಡುವುದು. ಬೇಸರ, ದಣಿದಿದ್ದೇನೆ ಸಾಕು ಅಂತಲೋ ಗಾಢನಿದ್ದೆಯಲ್ಲಿದ್ದಾನೆ.

* * *

ಮೂಲೆಯಲ್ಲಿ ಮಲಗಿರುವ ಮುತ್ತಜ್ಜಿ ನಡುರಾತ್ರಿ ಎದ್ದು ಕುಳಿತಳು. 'ಈಪಾಟಿ ಆಸ್ತಿಗೆ ಹಕ್ಕುದಾರನೇ ಇಲ್ಲವಲ್ಲಪ್ಪ, ಹಾಳು ಮನೆದೇವರೇ... ಯಾವ

